ಮುಖಮುಖ ನೋಡಿಕೊಂಡರು. ಆಗ ಭೀಮ 'ಇವತ್ತು ಮುದ್ದೆ ಬಸ್ಸಾರು, ಒಬ್ಬಟ್ಟು, ಕೀರು, ಒತ್ತುಶಾವಿಗೆ, ವಡೆ, ಚಿತ್ರಾನ್ನ ಮಾಡಿಸುವ' ಎಂದು ಬುಟ್ಟಿಯಲ್ಲಿದ್ದ ಬೆಕ್ಕನ್ನು ಹೊರ ತೆಗೆದ. 'ಏಯ್ ಬೆಕ್ಕೆ, ನೀನು ಮನೆಗೆ ಹೋಗಿ ನಾನು ಹೇಳಿದ ಇಷ್ಟು ಅಡುಗೆಯನ್ನು ಮಾಡಲು ಅಮ್ಮನಿಗೆ ಹೇಳು' ಎಂದು ಬೆಕ್ಕನ್ನು ಬಿಟ್ಟನು. ಅದು ಚೆಂಗನೆ ನೆಗೆದು ಹೊರಟು ಹೋಯಿತು.

ಗೆಳೆಯರು 'ಆ ಬೆಕ್ಕು ಹೋಗಿ ನಿನ್ನಮ್ಮನ ಹತ್ತಿರ ಇಷ್ಟೆಲ್ಲಾ ಅಡುಗೆ ಮಾಡು ಎಂದು ಹೇಳುತ್ತಾ, ನಮ್ಮತ್ರ ಇದೆಲ್ಲಾ ಬೇಡ' ಎಂದರು. ಭೀಮ, ಯಾಕೆ ಹೇಳಲ್ಲ, ಬೆಕ್ಕು ಮನೆಗೆ ಹೋಗಿ ಹೇಳುತ್ತೆ ಬೇಕಿದ್ರೆ ನಮ್ಮ ಮನೆಗೆ ಬಂದು ಇವತ್ತು ಊಟ ಮಾಡಿ. ಆಗ ನಿಮಗೆ ತಿಳಿಯುತ್ತೆ ಎಂದ.

ಮೂವರು ಭೀಮನ ಮನೆಗೆ ಬಂದರು. ಭೀಮ, ಅಮ್ಮನಿಗೆ 'ಏನು ಅಡುಗೆ ಮಾಡಿದಿಯಾ?' ಎಂದ. ಅವರಮ್ಮ 'ಬೆಕ್ಕು ಬಂದು ಹೇಳಿದ್ದನ್ನ ಮಾಡಿದಿನಿ' ಎಂದು ಅವರಿಗೆ ಊಟ ಹಾಕಿದಳು. ಭೀಮ ಹೇಳಿದ್ದ ಅಡುಗೆಯನ್ನು ಮಾಡಿದ್ದಳು. ಮೂವರು ಗೆಳೆಯರು ಗಡದ್ದಾಗಿ ಉಂಡು ಪಿಸಿಪಿಸಿ ಎಂದು ಮಾತಾಡಿಕೊಂಡು ಈ ಬೆಕ್ಕನ್ನು ನಮಗೆ ಕೊಡು ಅಂದರು. 'ಬೆಕ್ಕನ್ನು ಮಾರುವುದೇ! ಇದು ನಡೆಯುವ ಮಾತಲ್ಲ' ಎಂದ ಭೀಮ. ಗೆಳೆಯರು ಬಲವಂತ ಮಾಡಿದಾಗ ಭೀಮ ಈ ಬೆಕ್ಕಿಗೆ ಬೆಲೆ ಕಟ್ಟಲಾಗದು ಎಂದನು. ಮೂವರು ಚೌಕಾಸಿ ಮಾಡಿ ಮಾಡಿ ಸಾವಿರ ರೂಗಳನ್ನು ಕೋಡುತ್ತೇನೆ ಎಂದಾಗ ಭೀಮ ಒಪ್ಪಿ ಹಣ ಪಡೆದು ಬೆಕ್ಕಿನ ಬುಟ್ಟಿಯನ್ನು ಅವರಿಗೆ ಕೊಟ್ಟನು.

ಅವರು ಬುಟ್ಟಿಯನ್ನು ತೆಗೆದುಕೊಂಡು ಹೋಗುವಾಗ ನಮಗೆ ಏನೇನು ಅಡುಗೆ ಬೇಕು ಅದನ್ನೆಲ್ಲ ಹೇಳಿ ನಮ್ಮ ಮನೆಗಳಿಗೆ ಕಳಿಸಣ ಎಂದು 'ನೋಡು ಬೆಕ್ಕೆ ಮೊದಲು ನಮ್ಮ ಮನೆ ಸಿಗುತ್ತದೆ. ನನಗೆ ಮುದ್ದೆ ಸೊಪ್ಪು ಸಾರು ಮಾಡಕೆ ಹೇಳು' ಎಂದ. ವೆಂಕಟ 'ನನ್ನ ಮನೆ ಎರಡನೆಯದು ನನಗೆ ಹುರುಳಿಕಾಳು ಸಾರು, ಅಕ್ಕಿರೊಟ್ಟಿ ಮಾಡಕೆ ಹೇಳು ನನ್ನ ಹೆಂಡತಿಗೆ' ಎಂದ. ಹುಚ್ಚಪ್ಪ 'ನನ್ನ ಮನೆ ಮೂರನೆಯದು ನನಗೆ ಅನ್ನ ಬೇಳೆ ಸಾರು ಮಾಡು ಎಂದು ಹೇಳು ನನ್ನ ಹೆಂಡತಿಗೆ' ಎಂದು ಬೆಕ್ಕನ್ನು ಬಿಟ್ಟರು. ಅದು ಓಡಿಹೋಯಿತು. ಮೂವರು ಮನೆಗೆ ಬಂದು ತಮ್ಮ ತಮ್ಮ ಹೆಂಡತಿಯರಿಗೆ ಬೆಕ್ಕು ಬಂದು ಹೇಳಿದ್ದಂಗೆ ಅಡುಗೆ ಮಾಡಿದ್ದಾರಾ ಎಂದು ಕೇಳಿದರು. ಅವರ ಹೆಂಡತಿಯರು 'ಏನು, ಬೆಕ್ಕು ಬಂದು ನಮಗೆ ಅಡುಗೆ ಮಾಡೋದನ್ನು ಹೇಳುತ್ತ ಯಾವ ಬೆಕ್ಕು ಗಿಕ್ಕು ಬಂದಿಲ್ಲ ಹೋಗಿ' ಎಂದರು.

ಬೆಕ್ಕು ಈಗ ಬರಬಹುದು ಎಂದು ಕಾದರು. ರಾತ್ರಿಯಾದರೂ ಬರಲಿಲ್ಲ. ಭೀಮ ಮೋಸ ಮಾಡಿದನೆಂದು ಅವನ ಮನೆಗೆ ಹೋಗಿ ಬಯ್ದು ತಮ್ಮ ಹಣವನ್ನು ವಾಪಸ್ಸು ಕೊಡು ಎಂದರು. 'ನಮ್ಮ ಹಸುವಿನ ಬೆಲೆ ಎಂಟು ನೂರು, ನಮ್ಮಪ್ಪನಿಗೆ ಹಸುವನ್ನು ಕುರಿ ಎಂದು ನಂಬಿಸಿದ್ದಕ್ಕೆ ಇನ್ನೂರು ರೂಪಾಯಿ ಅಲ್ಲಿ ಸರಿಯಾಯಿತು ಹೋಗಿ' ಎಂದ ಭೀಮ. ಮೂವರು ಗೆಳೆಯರು ಬಾಯಿ ಮುಚ್ಚಿಕೊಂಡು ಹೋದರು. ■



# ಹುಳಿ ದ್ರಾಕ್ಷಿ ತಿನ್ನೋರ್ಯಾರು?

■ ಶೇಖರಯ್ಯ ಟಿ.ಎಚ್.ಎಂ.
ಕಲೆ: ಸಂತೋಷ್ ಸಸಿಹಿತ್ಲು



ಕುರುಚಲು ಕಾಡಲಿ
ಸಣಕಲು ದೇಹದ
ನರಿಯೂ ಒಂದಿತ್ತು
ಕಾಡಲಿ ತಿನ್ನಲು
ಏನೂ ಸಿಗದೇ
ತೋಟಕೆ ನುಗ್ಗಿತ್ತು

ತೋಟದಿ ದ್ರಾಕ್ಷಿ
ಬಳ್ಳಿಯ ಗೊಂಚಲು
ಕಣ್ಣಿಗೆ ಕಂಡಿತ್ತು
ದ್ರಾಕ್ಷಿಯ ಕಂಡು
ಅದರ ಬಾಯಲಿ
ನೀರು ಬಂದಿತ್ತು

ದ್ರಾಕ್ಷಿಯ ಹಿಡಿಯಲು
ನರಿಯು ತಾನು
ಯತ್ನವ ಮಾಡಿತ್ತು
ಎಷ್ಟೇ ಯತ್ನವ
ಮಾಡಿದರೂನು
ಸಿಗದೇ ಹೋಗಿತ್ತು

ತನಗೇ ಸಿಗದ
ದ್ರಾಕ್ಷಿಗೆ ನರಿಯು
ಹುಳಿಯು ಎಂದಿತ್ತು
ಹುಳಿಹುಳಿ ದ್ರಾಕ್ಷಿ
ತಿನ್ನೋರ್ಯಾರು
ಅಂತ ಬೈದಿತ್ತು ■

## ಕುಂಚ ಪ್ರಪಂಚ





ಲೋಚನ್ ಸಿ.
10ನೇ ತರಗತಿ,
ಹಿಲ್‌ರಾಕ್ ನ್ಯಾಷನಲ್
ಪಬ್ಲಿಕ್ ಶಾಲೆ,
ಬೆಂಗಳೂರು